ಎಂ.ವಿ.ಸಿ. ಸಂಖ್ಯೆಃ **321/2024**
ಪಿ.ಡಬ್ಲ್ಯೂಃ**1**

<u>ದಿನಾಂಕಃ **09-09-2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>
<u>ಪಾಟೀ ಸವಾಲುಃ ಶ್ರೀ ಹೆಚ್.ಎ .ಟಿ. ವಕೀಲರಿಂದಃ **3** ನೇ ಎದುರುದಾರರ ಪರವಾಗಿಃ</u>

ನಮ್ಮ ತಂದೆಯವರು ಮೃತರಾದ ನಂತರ ಅದೇ ದಿನ ನಾವು ಪೋಲಿಸ್ ಠಾಣೆಗೆ ಹೋಗಿದ್ದೆವು. ಪೋಲಿಸ್ ಠಾಣೆಯಿಂದ ದಾಖಲೆಗಳನ್ನು ಯಾವಾಗ ಪಡೆದಿರುತ್ತೀರಿ ಎಂದರೆ ಅಪಘಾತವಾದ 6-7 ತಿಂಗಳ ನಂತರ ಪಡೆದುಕೊಂಡಿರುತ್ತೇನೆ. ಅಪಘಾತದ ನಮ್ಮ ತಂದೆಯವರು ಮೃತರಾದ ನಂತರ ನಾವುಗಳು ನಮ್ಮ ಮನೆಯ ವ್ಯವಹಾರವನ್ನು ಮಾಡುತ್ತಿದ್ದೆವು. ಪೋಲಿಸ್ ಠಾಣೆಗೆ ಹೋಗಿ ದಾಖಲೆಯನ್ನು ಕೊಡಿ ಎಂದು ಯಾವಾಗ ಕೇಳಿರುತ್ತೀರಿ ಎಂದರೆ ಮರೆತು ಹೋಗಿರುತ್ತದೆ. ನಾವು ಉದ್ದೇಶ ಪೂರ್ವಕವಾಗಿ ಪರಿಹಾರ ಅರ್ಜಿಯನ್ನು ವಿಳಂಬವಾಗಿ ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ. 47 ದಿನಗಳ ವಿಳಂಬಕ್ಕೆ ನಾವು ಸರಿಯಾದ ಕಾರಣವನ್ನು ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. ವಿಮಾ ಸಂಸ್ಥೆಯಿಂದ ಪರಿಹಾರ ಪಡೆಯುವ ಉದ್ದೇಶಕ್ಕಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓಃಹೇಃಕೇಃಸಃಇಃಎಃಒಃ

ಸಹಿ/-
1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರ.ದ.ನ್ಯಾದಂ.,ಚಿಕ್ಕಮಗಳೂರು.

*MSU*